Spl. C 41/2023
PW: 05
CW: 10

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ

## SPECIAL CASE :41/2023

**ಪ್ರಾ.ಸಾ. 05**

**ದೋ.ಸಾ. 10**

| | | |
|---|---|---|
| ಸಾಕ್ಷಿಯ ಹೆಸರು | : | ಸತ್ಯನಾರಾಯಣಪ್ಪ |
| ತಂದೆಯ ಹೆಸರು | : | ಲೇಟ್ ನಾರಾಯಣಪ್ಪ |
| ವಯಸ್ಸು | : | 63 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ | : | ಕಂದವಾರ ಗ್ರಾಮ |

**ದಿನಾಂಕ 21.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು ಕಂದವಾರ ಗ್ರಾಮದ ನಿವಾಸಿಯಾಗಿದ್ದು, ನನ್ನ ಹೆಸರಿನಲ್ಲಿ ಮುಕ್ಕಾಲು ಎಕರೆ ಜಮೀನು ಇದೆ . ಸದರಿ ಜಮೀನಿನ ಸರ್ವೆ ನಂ 160/4 ಆಗಿದ್ದು, RTC ನನ್ನ ಹೆಸರಿನಲ್ಲಿದೆ. ಸದರಿ ಜಮೀನನ್ನು ನಾನೇ ನೋಡಿಕೊಳ್ಳುತ್ತಿದ್ದು, ವ್ಯವಸಾಯ ಮಾಡುತ್ತೇನೆ. ಸಾಕ್ಷಿ ಪುನಃ ನುಡಿಯುತ್ತಾರೆ, ಬೋಗ್ಯಕ್ಕೆ ಕೊಟ್ಟಿದ್ದು, ಈಗ 2 ವರ್ಷದ ಹಿಂದೆ ಬಿಡಿಸಿಕೊಂಡಿರುತ್ತೇನೆ. ನನಗೆ 5 ಜನ ಮಕ್ಕಳು. ನ್ಯಾಯಾಲಯದ ಮುಂದೆ ಹಾಜರಾಗಿರುವ ಆರೋಪಿ ನನ್ನ 2 ನೇ ಮಗ.

2. ಸದರಿ ಜಮೀನನಲ್ಲಿ ರಾಗಿ ಮತ್ತು ಜೋಳವನ್ನು ಬೆಳೆಯುತ್ತೇನೆ. ನಿಮ್ಮ ಜಮೀನಿಗೆ ಪೊಲೀಸರು ಬಂದು ವಿಚಾರಣೆ ಮಾಡಿದ್ದರೆ ಎಂದರೆ ಸಾಕ್ಷಿಯು ನಾನು ಕೆಲಸಕ್ಕೆ ಹೋಗಿದ್ದ ಸಮಯದಲ್ಲಿ ಪೊಲೀಸರು ಬಂದು, ನನ್ನ ಮಗನನ್ನು ಕರೆದುಕೊಂಡು ಹೋಗಿದ್ದರು. ನಾನು ಪೊಲೀಸರಿಗೆ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು.)

**ಪಾಟೀಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

3). " **ನಮ್ಮ ಗ್ರಾಮದ ಸರ್ವೆ ನಂ.160 ರಲ್ಲಿ ಜಮೀನು ನಮ್ಮ ತಂದೆಯಿಂದ ಬಂದಿರುವ ಪಿತ್ರಾರ್ಜಿತ ಆಸ್ತಿಯಾಗಿದ್ದು, ಅದರಲ್ಲಿ .033 ಗುಂಟೆ ಜಮೀನು ಇರುತ್ತದೆ. ಇದರಲ್ಲಿ ಕೊಳವೆ ಬಾವಿಯನ್ನು ನಾನು ಮಾಡಿಸಿ ಜಿರಾಯ್ತಿ ಕೆಲಸವನ್ನು ಮಾಡುತ್ತಿದ್ದೆ ಸಿ. ಆದರೆ ಈಗ ನನಗೆ 65 ವರ್ಷಗಳು ವಯಸ್ಸಾಗಿದ್ದು, ನಿಶಕ್ತನಾಗಿರುವ ಕಾರಣ ಈಗ ನಾನು ಜಮೀನಿನ ಬಳಿಗೆ ಹೋಗುವುದಿಲ್ಲ. ಎಲ್ಲಾ ಜಮೀನಿನ ಉಸ್ತುವಾರಿಯನ್ನು ನನ್ನ ಮಗನೇ ನೋಡಿಕೊಳ್ಳುತ್ತಿದ್ದು, ಕೊಳವೆ ಬಾವಿಯಲ್ಲಿ ಬರುವ ನೀರನ್ನು ಬಳಸಿಕೊಂಡು ನನ್ನ ಮಗ ವೇಣುಗೋಪಾಲ್ ರೋಜಾ ಗಿಡಗಳು, ಕನಕಾಂಬರ ಹೂವು ಗಿಡಗಳ ಬೆಳೆಯನ್ನು ಮಾಡಿಕೊಂಡು ನೋಡಿಕೊಳ್ಳುತ್ತಿರುತ್ತಾನೆ. ಇತ್ತೀಚೆಗೆ ಸದರಿ ಜಮೀನಿನಲ್ಲಿ ರೋಜಾ ಗಿಡಗಳು, ಕನಕಾಂಬರ ಹೂವು ಗಿಡಗಳ ಮಧ್ಯ ಅಲ್ಲಲ್ಲಿ 05 ಗಾಂಜಾ ಗಿಡಗಳನ್ನು ಬೆಳೆಸಿರುವುದಾಗಿ ಮತ್ತು ಅವುಗಳನ್ನು ದಿ.20.09.2022 ರಂದು ಪೊಲೀಸರು ದಾಳಿ ಮಾಡಿ ಅಮಾನತ್ತು ಪಡಿಸಿಕೊಂಡು ಹೋಗಿರುವ ಮತ್ತು ನನ್ನ ಮಗನನ್ನು ದಸ್ತಗಿರಿ ಮಾಡಿದ ವಿಚಾರ ನನಗೆ ತಿಳಿದಿರುತ್ತದೆ. ಮತ್ತು ಸದರಿ ಸರ್ವೆ ನಂ.160 ರಲ್ಲಿನ ಜಮೀನು ನನ್ನ ಒಬ್ಬನೇ ಮಗ ವೇಣುಗೋಪಾಲ್ ನ ಉಸ್ತುವಾಗಿಗೆ ನೀಡಿದ್ದು, ಅವನೇ ಬೆಳೆಯನ್ನು ಮಾಡಿಕೊಂಡು ಅನುಭವದಲ್ಲಿ ಇರುತ್ತಾನೆ"** ಎಂದು ಈಗ ಓದಿ

ಹೇಳಿದಂತೆ ಹೇಳಿಕೆ  ನೀಡಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆಯ ಸದರಿ ಭಾಗವನ್ನು **ನಿಪಿ.**11 ಎಂದು ಗುರುತಿಸಲಾಯಿತು.  ಎಲ್ಲಾ ವಿಚಾರಗಳು ಗೊತ್ತಿದ್ದರು ಸಹ ಆರೋಪಿ ನನ್ನ ಮಗನಾದ ಕಾರಣ ಆತನಿಗೆ  ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಪಿ.ಎಸ್ ರವರಿಂದಃ**

4. ಪೊಲೀಸರು ನನ್ನ ಬಳಿ ನನ್ನ ಜಮೀನಿಗೆ ಸಂಬಂಧಿಸಿದ ಯಾವುದೇ ರೆವೆನ್ಯೂ ದಾಖಲೆಗಳನ್ನು ಪಡೆದಿರುವುದಿಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.
Sd/-

**(ಟಿ. ಪಿ. ರಾಮಲಿಂಗೆ ಗೌಡ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.